# ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಯು.ಬಿ. ವೆಂಕಟೇಶ್ ಇವರು ನಿಯಮ 330 ರಡಿಯಲ್ಲಿ ನೀಡಿರುವ ಸೂಚನೆಗೆ ಮಾಹಿತಿ

## ಸೂಚನೆ:-

ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್‌ನ ಅವ್ಯವಹಾರದಲ್ಲಿ ಭಾಗಿಯಾಗಿರುವವರ ವಿರುದ್ಧ ಕ್ರಮ ಕೈಗೊಳ್ಳದಿರುವ ಬಗ್ಗೆ ಹಾಗೂ ಠೇವಣಿದಾರರಿಗೆ ಈವರೆಗೆ ನ್ಯಾಯ ಸಿಗದಿರುವ ಕುರಿತು ಹಾಗೂ ಕಳೆದ ಅಧಿವೇಶನದಲ್ಲಿ ಮಾನ್ಯ ಸಹಕಾರ ಸಚಿವರು ಸದನದಲ್ಲಿ ನೀಡಿರುವ ಭರವಸೆಯೂ ಇನ್ನೂ ಜಾರಿಯಾಗದಿರುವ ಬಗ್ಗೆ ನಿಯಮ 330 ರಡಿಯಲ್ಲಿ ಮಾನ್ಯ ಸಹಕಾರ ಸಚಿವರನ್ನು ಗಮನ ಸೆಳೆಯ ಬಯಸುತ್ತೇನೆ.

## ಮಾಹಿತಿ:

## ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ನಿ. ಬೆಂಗಳೂರು.

- ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ನಿ., ಬೆಂಗಳೂರು, ಈ ಬ್ಯಾಂಕ್ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರಡಿಯಲ್ಲಿ ದಿನಾಂಕ: **12-04-1999** ರಲ್ಲಿ ನೋಂದಣಿಗೊಂಡಿದೆ.

- ಬ್ಯಾಂಕಿನ ಕಾರ್ಯವ್ಯಾಪ್ತಿಯು ಬೆಂಗಳೂರು, ಬೆಂಗಳೂರು ಗ್ರಾಮಾಂತರ, ತುಮಕೂರು, ರಾಮನಗರ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಸೀಮಿತವಾಗಿದೆ.

- ಬ್ಯಾಂಕಿಂಗ್ ರೆಗ್ಯೂಲೇಷನ್ ಅಧಿನಿಯಮ 1949 ರಡಿಯಲ್ಲಿ ದಿನಾಂಕ :**26-08-1999** ರಂದು ಭಾರತೀಯ ರಿಸರ್ವ್ ಬ್ಯಾಂಕಿನಿಂದ ಬ್ಯಾಂಕಿಂಗ್ ಚಟುವಟಿಕೆ ಕೈಗೊಳ್ಳಲು ಪರವಾನಿಗೆ ಪಡೆದಿರುತ್ತದೆ.

- ಭಾರತೀಯ ರಿಸರ್ವ್ ಬ್ಯಾಂಕಿನವರು 2019 ರಲ್ಲಿ ಈ ಬ್ಯಾಂಕಿನ ಶಾಸನಾತ್ಮಕ ಪರಿವೀಕ್ಷಣೆ ಕೈಗೊಂಡ ಸಂದರ್ಭದಲ್ಲಿ ಬ್ಯಾಂಕಿನಲ್ಲಿ ವಂಚನೆ, ಅವ್ಯವಹಾರ, ಹಣ ದುರುಪಯೋಗವಾಗಿರುವುದು ಕಂಡು ಬಂದಿದೆ.

- ಭಾರತೀಯ ರಿಸರ್ವ್ ಬ್ಯಾಂಕ್ ದಿನಾಂಕ:**10-01-2020** ರಂದು ಬ್ಯಾಂಕಿಂಗ್ ರೆಗ್ಯುಲೇಷನ್ ಅಧಿನಿಯಮ 1949 ರ ಪ್ರಕರಣ 35ಎ

ಅಡಿಯಲ್ಲಿ ಈ ಬ್ಯಾಂಕಿಗೆ ಬ್ಯಾಂಕಿಂಗ್ ಚಟುವಟಿಕೆಗಳನ್ನು ಕೈಗೊಳ್ಳಲು ನಿರ್ಬಂಧಿಸಿ ಆದೇಶಿಸಿರುತ್ತದೆ.

- ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 30(6) ರಡಿಯಲ್ಲಿ ಬ್ಯಾಂಕಿಗೆ ಆಡಳಿತಾಧಿಕಾರಿ ನೇಮಿಸಿದ್ದು, ನಂತರ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ನಿರ್ದೇಶನದ ಪ್ರಕಾರ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವ ಶ್ರೀ ಆರ್.ಅಶೋಕನ್ ಎಂಬುವವರನ್ನು ಆಡಳಿತಾಧಿಕಾರಿಯನ್ನಾಗಿ ಬದಲಿಸಿದ್ದು ಅವರು ಆಡಳಿತಾಧಿಕಾರಿಯಾಗಿ ಮುಂದುವರೆದಿರುತ್ತಾರೆ.

**ಭಾರತೀಯ ರಿಸರ್ವ್ ಬ್ಯಾಂಕಿನವರು ಈ ಬ್ಯಾಂಕಿನ ಶಾಸನಾತ್ಮಕ ಪರಿವೀಕ್ಷಣೆಯನ್ನು 2019 ರಲ್ಲಿ ಕೈಗೊಂಡ ಸಂದರ್ಭದಲ್ಲಿ ಗಂಭೀರ ಸ್ವರೂಪದ ಲೋಪ ದೋಷಗಳು ಕಂಡು ಬಂದಿರುತ್ತವೆ. ಅವುಗಳ ಸ್ಥೂಲ ಅಂಶಗಳು ಕೆಳಕಂಡಂತಿರುತ್ತದೆ.**

- ಬ್ಯಾಂಕ್ ಕೃತ್ರಿಮ (Artificial) ಠೇವಣಾತಿ ಸೃಷ್ಟಿಸಿರುವುದು, ಠೇವಣಾತಿದಾರರು ನೈಜವಾಗಿ ಇಲ್ಲದಿದ್ದರೂ ಅನ್ಯರ ಹೆಸರಿನಲ್ಲಿ ಠೇವಣಾತಿ ಮಾಡಿರುವುದು.
- ರೂ.1544.43 ಕೋಟಿ ಸಾಲ ಪ್ರಕರಣಗಳಿಗೆ ಸಂಬಂಧಿಸಿದಂತೆ 1576 ಸಾಲದ ಖಾತೆಗಳಿಗೆ ದಾಖಲೆಗಳು ಇಲ್ಲದಿರುವುದು.
- ಸಾಲ ಮಂಜೂರಾತಿ ಪ್ರಾಧಿಕಾರ ಸಾಲವನ್ನು ಮಂಜೂರು ಮಾಡದಿದ್ದರೂ ಸಾಲದ ಹಣವನ್ನು ಬಿಡುಗಡೆ ಮಾಡಿರುವುದು.
- 24 ಮುಖ್ಯ ಫಲಾನುಭವಿಗಳಿಗೆ (ಸಾಲಗಾರರಿಗೆ) ರೂ. 892.85 ಕೋಟಿ ಸಾಲ ಮಂಜೂರು ಮಾಡಿ ಹಣ ದುರುಪಯೋಗ ಮಾಡಿರುವುದು.
- ಠೇವಣಾತಿ ಇಲ್ಲದಿದ್ದರೂ ಠೇವಣಾತಿ ಇದೆ ಎಂದು ಸಾಲ ಮಂಜೂರು ಮಾಡಿರುವುದು. ಈ ರೀತಿ ರೂ.409.11 ಕೋಟಿಗಳನ್ನು ಮಂಜೂರು ಮಾಡಲಾಗಿದೆ.
- ಠೇವಣಾತಿದಾರರ ಒಪ್ಪಿಗೆ ಅಥವಾ ಸಹಮತಿ ಇಲ್ಲದೇ ಒಪ್ಪಿಗೆ ನೀಡದವರ ಹೆಸರಿನಲ್ಲಿ ಠೇವಣಾತಿ ಸಾಲ ನೀಡಿರುವುದು.
- ಆದಾಯ ಗುರುತಿಸುವಿಕೆ-ಆಸ್ತಿ ವರ್ಗೀಕರಣ (Income Recognition and Asset Classification Norms) (IRAC-NORMS) ನಿಯಮಗಳನ್ನು ಪಾಲಿಸದೇ ಸ್ಪಷ್ಟವಾಗಿ ಕಾನೂನು ಉಲ್ಲಂಘನೆ ಮಾಡಿ ವಾಸ್ತವಾಂಶವನ್ನು ಮರೆಮಾಚಿರುವುದು.

**ಬ್ಯಾಂಕಿನ ಅವ್ಯವಹಾರದಲ್ಲಿ ಭಾಗಿಯಾಗಿರುವವರ ವಿರುದ್ಧ ಈವರೆಗೆ ತೆಗೆದುಕೊಂಡಿರುವ ಕ್ರಮಗಳ ವಿವರಗಳು:**

1. ಬ್ಯಾಂಕಿನಲ್ಲಿ ನಡೆದಿರುವ ಅವ್ಯವಹಾರಕ್ಕೆ ಸಂಬಂಧಪಟ್ಟಂತೆ ಬ್ಯಾಂಕಿನ ಆಡಳಿತ ಮಂಡಳಿಯ ಎಲ್ಲಾ ನಿರ್ದೇಶಕರ ವಿರುದ್ಧ ಬಸವನಗುಡಿ ಪೋಲಿಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ:37/2020 ಅಡಿ ಪ್ರಕರಣ ದಾಖಲಾಗಿರುತ್ತದೆ ಮತ್ತು ಸಿಐಡಿ ತನಿಖೆಗೆ ಆದೇಶಿಸಲಾಗಿರುತ್ತದೆ.
2. ಬ್ಯಾಂಕಿನಲ್ಲಿ ಆಡಳಿತ ಮಂಡಳಿಯ ಸದಸ್ಯರು ಮತ್ತು ಸಾಲ ಪಡೆದು ಮರು ಪಾವತಿ ಮಾಡದೇ ಇರುವ ಸಾಲಗಾರರು ಮತ್ತು ಬ್ಯಾಂಕಿನ ಅಧಿಕಾರಿ, ಸಿಬ್ಬಂದಿಗಳನ್ನು ಒಳಗೊಂಡಂತೆ ಒಟ್ಟು 42 ಜನ ಆರೋಪಿಗಳನ್ನು ದಸ್ತಗಿರಿ ಜರುಗಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿರುತ್ತದೆ.
3. ಆರೋಪಿತರು ಮತ್ತು ಅವರ ಅವಲಂಬಿತ ಸದಸ್ಯರ ಹೆಸರಿನಲ್ಲಿದ್ದ ಒಟ್ಟು 9548 ವಿವಿಧ ಬ್ಯಾಂಕ್ ಖಾತೆಗಳಲ್ಲಿದ್ದ ರೂ. 15 ಕೋಟಿಗೂ ಹೆಚ್ಚು ಹಣವನ್ನು ಫ್ರೀಜ್ ಮಾಡಲಾಗಿರುತ್ತದೆ. ತನಿಖೆಯಲ್ಲಿ ಆರೋಪಿತರು ಹಾಗೂ ಅವರ ಸಂಬಂಧಿಕರ ಹೆಸರಿನಲ್ಲಿದ್ದ ಸುಮಾರು ರೂ.1,115.00/- ಕೋಟಿಗಿಂತ ಹೆಚ್ಚಿಗೆ ಬೆಲೆಬಾಳುವ ಸ್ಥಿರಾಸ್ತಿಗಳನ್ನು ಗುರುತಿಸಿ ಪ್ರಿವೆನ್ಷನ್ ಆಫ್ ಮನಿಲ್ಯಾಂಡ್ರಿಂಗ್ ಆಕ್ಟ್ ಅಡಿಯಲ್ಲಿ ಕ್ರಮ ಜರುಗಿಸಲು ಜಾರಿ ನಿರ್ದೇಶನಾಲಯಕ್ಕೆ ವರದಿ ಸಲ್ಲಿಸಲಾಗಿರುತ್ತದೆ.
4. ಈ ಬ್ಯಾಂಕಿನಲ್ಲಿ ಹೆಚ್ಚಿನ ಸಾಲ ಪಡೆದುಕೊಂಡು ವಿದೇಶದಲ್ಲಿ ತಲೆ ಮರೆಸಿಕೊಂಡಿರುವ ಜಶ್ವಂತ ರೆಡ್ಡಿ ಮತ್ತು ರಂಜಿತ್ ರೆಡ್ಡಿ ರವರ ವಿರುದ್ಧ ರೆಡ್ ಕಾರ್ನರ್ ಹೊರಡಿಸುವಂತೆ ಸಿಐಡಿಯವರು ಸಿಬಿಐಗೆ ಕೋರಿರುತ್ತಾರೆ.
5. ಬ್ಯಾಂಕಿನಲ್ಲಿ ಏಪ್ರಿಲ್ 2009 ನೇ ಸಾಲಿನಿಂದ ಜನವರಿ 2020ರ ಸಾಲಿನವರೆಗೆ ನಡೆದಿರುವ ಹಣಕಾಸಿನ ಅವ್ಯವಹಾರದ ಬಗ್ಗೆ ಮತ್ತು ಸುಳ್ಳು ಲಾಭ ನಷ್ಟದ ತಃಖ್ತೆಯ ಕುರಿತು ಮೆ.ಕೆನ್ & ಕಂಪನಿರವರ ಫಾರೆನ್ಸಿಕ್ ಆಡಿಟ್ ನಡೆಸುತ್ತಿದ್ದು, ಹಾಲಿ 2009-10 ನೇ ಸಾಲಿನ ಹಣಕಾಸಿನ ಅವ್ಯವಹಾರದ ಬಗ್ಗೆ ಆಡಿಟ್ ವರದಿಯನ್ನು ಸಲ್ಲಿಸಿದ್ದರ ಮೇರೆಗೆ ದಿನಾಂಕ:12-08-2021 ರಂದು ಮಾನ್ಯ 1ನೇ ಎ.ಸಿ.ಎಂ.ಎಂ. ನ್ಯಾಯಾಲಯ ಬೆಂಗಳೂರು ನಗರ 2009-10 ನೇ ಸಾಲಿನಲ್ಲಿ ನಡೆದಿರುವ

ಹಣಕಾಸಿನ ಅವ್ಯವಹಾರಕ್ಕೆ ಸಂಬಂಧಪಟ್ಟಂತೆ ಒಟ್ಟು 28 ಜನ ಆರೋಪಿಗಳ ವಿರುದ್ಧ ಪ್ರಾರ್ಥಮಿಕ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿದೆ. ಈ ದೋಷಾರೋಪಣಾ ಪಟ್ಟಿಯನ್ನು ಸಿ.ಸಿ. ನಂಬರ್ 28892/2021 ರಲ್ಲಿ ಅಂಗೀಕರಿಸಿ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿರುತ್ತದೆ.

6. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಪ್ರಕರಣ 64 ರ ವಿಚಾರಣೆಗೆ ಆದೇಶಿಸಲಾಗಿದೆ. ವಿಚಾರಣೆಯಲ್ಲಿ ಒಟ್ಟು 20 ಆರೋಪಗಳ ಬಗ್ಗೆ ವಿಚಾರಣೆ ನಡೆಸಲಾಗಿದೆ. ಪ್ರಕರಣ 64ರ ವಿಚಾರಣಾಧಿಕಾರಿಗಳು ವಿಚಾರಣೆ ಪೂರ್ಣಗೊಳಿಸಿ ದಿನಾಂಕ:08-02-2022 ರಂದು ವಿಚಾರಣಾ ವರದಿ ಸಲ್ಲಿಸಿರುತ್ತಾರೆ. ವಿಚಾರಣಾ ವರದಿಯನ್ನು ಬ್ಯಾಂಕಿಗೆ ದಿನಾಂಕ: 03-03-2022ರಂದು ಕಳುಹಿಸಿದ್ದು, ದಿನಾಂಕ: 21-05-2022ರಂದು ಬ್ಯಾಂಕ್ ಅನುಪಾಲನಾ ವರದಿ ಸಲ್ಲಿಸಿರುತ್ತದೆ. ದಿನಾಂಕ: 29-07-2022ರಂದು ಪ್ರಕರಣ 68ರಡಿ ನಿರ್ದೇಶನ ಹೊರಡಿಸಲಾಗಿದೆ. ಬ್ಯಾಂಕ್ ದಿನಾಂಕ: 05-12-2022 ರಂದು ಅನುಪಾಲನಾ ವರದಿ ಸಲ್ಲಿಸಿದೆ.

7. ಬ್ಯಾಂಕಿನ ಅವ್ಯವಹಾರದಲ್ಲಿ ಭಾಗಿಯಾಗಿದ್ದ, ಬ್ಯಾಂಕಿನ ಸಿಬ್ಬಂದಿ, ನಿರ್ದೇಶಕರು ಹಾಗೂ ಇತರ ಗ್ರಾಹಕರ ವಿರುದ್ಧ ಸಿ.ಐ.ಡಿ ಸಂಸ್ಥೆಯಲ್ಲಿ ಎಫ್ಐಆರ್ ಸಂಖ್ಯೆ 37/2020 ಹಾಗೂ ಈ.ಡಿ ಸಂಸ್ಥೆಯಲ್ಲಿ ECIR/BGZO/09/2020 ರಲ್ಲಿ ದೂರನ್ನು ದಾಖಲಿಸಲಾಗಿದೆ. ಸದರಿ ಸಿಬ್ಬಂದಿ ವಿವರವನ್ನು ಅನುಬಂಧ-1, ನಿರ್ದೇಶಕರುಗಳ ವಿವರವನ್ನು ಅನುಬಂಧ-2 ಮತ್ತು ಗ್ರಾಹಕರ ವಿವರವನ್ನು ಅನುಬಂಧ-3 ರಲ್ಲಿ ನೀಡಲಾಗಿದೆ.

ಶ್ರೀ ರಾಮಕೃಷ್ಣ ಕೆ, ಮಾಜಿ ಅಧ್ಯಕ್ಷರು, ಶ್ರೀ ಜಿ ಕೃಷ್ಣನ್, ಮಾಜಿ ನಿರ್ದೇಶಕರು ಹಾಗೂ ಅವರ ಸಂಬಂಧಿಕರು, ಶ್ರೀ ಸಂತೋಷ್ ಕುಮಾರ್ ಎ, ಮಾಜಿ ಕಾರ್ಯನಿರ್ವಹಣಾಧಿಕಾರಿ ಮತ್ತು ಅವರ ಸಹಚರರಾದ ಶ್ರೀ ಸುಧೀರ್ ಬಾಬು ಟಿ, ಶ್ರೀ ಚೇತನ್ ಕುಮಾರ್ ಮತ್ತು ಶ್ರೀ ರಾಮಣ್ಣ ಈ ರವರ ವಂಚನೆಯ ಮಾಹಿತಿ ಹಾಗೂ ವರದಿಗಳನ್ನು ಸಿ.ಐ.ಡಿ ಮತ್ತು ಈ.ಡಿ ಸಂಸ್ಥೆಗೆ ನೀಡಲಾಗಿದೆ. ಸಿಐಡಿ ಸಂಸ್ಥೆಯಿಂದ ಬ್ಯಾಂಕಿನ ಅಧ್ಯಕ್ಷರು ಹಾಗು ನಿರ್ದೇಶಕರುಗಳನ್ನು ಬಂಧಿಸಿ ನಂತರ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ ಎಂದು ತಿಳಿದು ಬಂದಿದೆ.

ಬ್ಯಾಂಕಿನಲ್ಲಿ ನಡೆದ ಅವ್ಯವಹಾರಗಳಲ್ಲಿ ಭಾಗಿಯಾಗಿದ್ದ 19 ಸಿಬ್ಬಂದಿಗಳಿಗೆ ಬ್ಯಾಂಕಿನ ಸೇವಾ ನಿಯಮದಡಿಯಲ್ಲಿ ಆರೋಪ ಪಟ್ಟಿಯನ್ನು ನೀಡಲಾಗಿತ್ತು. ಈ ಎಲ್ಲಾ ಪ್ರಕರಣಗಳು ಮುಕ್ತಾಯಗೊಂಡಿದ್ದು, ಶಿಸ್ತು ಕ್ರಮವನ್ನು ಜರುಗಿಸಿ 19 ಸಿಬ್ಬಂದಿಗಳನ್ನು ವಜಾಗೊಳಿಸಲಾಗಿದೆ. ಸದರಿ 19 ಸಿಬ್ಬಂದಿಗಳಲ್ಲಿ 12 ಸಿಬ್ಬಂದಿಗಳು ಸಹಕಾರ ಸಂಘಗಳ ನಿಬಂಧಕರ ಪ್ರಾಧಿಕಾರದ ಮುಂದೆ ಕಾಯ್ದೆ ಕಲಂ 70ರ ಅಡಿಯಲ್ಲಿ ಮೊಕದ್ದಮೆಯನ್ನು ಹೂಡಿರುತ್ತಾರೆ.

ಬ್ಯಾಂಕಿನಲ್ಲಿ ನಡೆದ ಅವ್ಯವಹಾರಗಳ ತನಿಖೆಯಡಿಯಲ್ಲಿ ಬಂಧನಕ್ಕೊಳಗಾದ ಬ್ಯಾಂಕಿನ ಸಿಬ್ಬಂದಿಗಳ ಪಟ್ಟಿಯನ್ನು ಸಿ.ಐ.ಡಿ ತನಿಖಾ ಸಂಸ್ಥೆಯವರು ದಿನಾಂಕ 24-05-2022 ರಂದು ಬ್ಯಾಂಕಿಗೆ ಒದಗಿಸಿರುತ್ತಾರೆ. ಬ್ಯಾಂಕಿನ ಸೇವಾ ನಿಯಮ 8.5 ರಂತೆ ಬಂಧನಕ್ಕೊಳಗಾದ ಬ್ಯಾಂಕಿನ 10 ಸಿಬ್ಬಂದಿಗಳನ್ನು ಸದರಿಯವರ ಬಂಧನದ ದಿನಗಳಿಂದ ಅನ್ವಯವಾಗುವಂತೆ ಕರ್ತವ್ಯದಿಂದ ವಜಾಗೊಳಿಸಲಾಗಿದೆ.

24 ಪ್ರಮುಖ ಸಾಲದ ಫಲಾನುಭವಿಗಳಲ್ಲಿ ಹೆಚ್ಚು ಸಾಲವನ್ನು ಪಡೆದ ಮೊದಲ 14 ಸಾಲಗಾರರ ಮಾಹಿತಿ ಹಾಗೂ ಲಭ್ಯವಿರುವ ದಾಖಲೆಗಳೊಂದಿಗೆ ತನಿಖಾ ವರದಿಯನ್ನು ಸಿ.ಐ.ಡಿ ಮತ್ತು ಈ.ಡಿ ಗೆ ಕಳುಹಿಸಿದ್ದು ವಿವರವನ್ನು ಅನುಬಂಧ 4 ರಲ್ಲಿ ನೀಡಲಾಗಿದೆ.

8. ದಿನಾಂಕ: 09-02-2022 ಮತ್ತು 17-08-2022 ರಂದು ಮಾನ್ಯ ಸಹಕಾರ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ, ಬ್ಯಾಂಕಿನಲ್ಲಿ ಅವ್ಯವಹಾರಗಳ ನಡೆಸಿರುವವರ ವಿರುದ್ಧ ಕಠಿಣ ಕ್ರಮ ಜರುಗಿಸಲು ಆಡಳಿತಾಧಿಕಾರಿಗಳು, ಸಿಐಡಿ ಮತ್ತು ಇಲಾಖೆಗೆ ಸೂಚಿಸಿರುತ್ತಾರೆ.

**ಠೇವಣಿದಾರರ ವಿವರಗಳು:** -

ದಿನಾಂಕ 15-12-2022 ರ ಅಂತ್ಯಕ್ಕೆ ಬ್ಯಾಂಕು (ಬ್ಯಾಂಕಿನ ಸ್ವಂತ ನಿಧಿಯಿಂದ ಪಾವತಿಸಿರುವುದು) ಠೇವಣಿದಾರರಿಗೆ ಪಾವತಿಸಿರುವ ವಿವರಗಳು ಕೆಳಕಂಡಂತಿದೆ.

| ವಿವರಗಳು | ಸಂಖ್ಯೆ | ಮೊತ್ತ (ಕೋಟಿಗಳಲ್ಲಿ) |
|---|---|---|
| ರೂ.1.00 ಲಕ್ಷದವರೆಗೆ | 22626 | ರೂ.29.08 |
| ರೂ.1.00 ಲಕ್ಷ ಮೇಲ್ಪಟ್ಟು | 19181 | ರೂ. 191.08 |
| ಒಟ್ಟು | **41804** | **ರೂ. 220.16** |
| ವೈದ್ಯಕೀಯ ಕ್ಲೈಂ | 793 | ರೂ.13.33 |
| ಒಟ್ಟು | **42597** | **ರೂ.233.49** |

ದಿನಾಂಕ 10-01-2020 ರಂದು ಬ್ಯಾಂಕು 41778 ಠೇವಣಾತಿದಾರರಿಗೆ ರೂ.2402.17 ಕೋಟಿ ಪಾವತಿಸಬೇಕಾಗಿತ್ತು. ಈ ಪೈಕಿ ಬ್ಯಾಂಕ್ ತನ್ನ ಸ್ವಂತ ನಿಧಿಯಿಂದ 42597 ಮಂದಿಗೆ (ರೂ.1.00 ಲಕ್ಷ ಜೊತೆಗೆ ವೈದ್ಯಕೀಯ ವೆಚ್ಚ) ರೂ.233.49 ಕೋಟಿ ಮೊತ್ತವನ್ನು ಪಾವತಿಸಿರುತ್ತದೆ.

ಅದೇ ರೀತಿ ಡಿಐಸಿಜಿಸಿ ವಿಮಾ ಸಂಸ್ಥೆಯು ನೀಡಿದ ಮೊತ್ತದ ಪೈಕಿ 22244 ಕ್ಲೈಂಗಳಿಗೆ ರೂ.712.35 ಕೋಟಿ ಪಾವತಿಸಿರುತ್ತದೆ. ಒಟ್ಟಾರೆ 41778 ಠೇವಣಿದಾರರ ಪೈಕಿ 32010 ಠೇವಣಾತಿದಾರರಿಗೆ ರೂ.332.39 ಕೋಟಿಯನ್ನು ಪಾವತಿಸಲಾಗಿದ್ದು (ದಿನಾಂಕ 10-01-2020 ರಲ್ಲಿದ್ದಂತೆ ರೂ.6.00 ಲಕ್ಷದವರೆಗಿನ ಮೊತ್ತದ ಠೇವಣಾತಿ ಹೊಂದಿದ್ದ ಎಲ್ಲಾ ಠೇವಣಾತಿದಾರರಿಗೆ ಪೂರ್ಣ ಠೇವಣಾತಿ ಹಣವನ್ನು ಪಾವತಿಸಲಾಗಿದೆ) ಒಟ್ಟು ಠೇವಣಾತಿದಾರರ ಶೇ.78.62 ಠೇವಣಾತಿದಾರರಿಗೆ ಪೂರ್ಣ ಮೊತ್ತವನ್ನು ಪಾವತಿಸಲಾಗಿದೆ.

ಡಿ.ಐ.ಸಿ.ಜಿ.ಸಿ ವಿಮಾ ಸಂಸ್ಥೆಯು ಬ್ಯಾಂಕಿನ ಅರ್ಹ ಠೇವಣಿದಾರರಿಗೆ ವಿಮಾ ಮೊತ್ತವನ್ನು ಪಾವತಿಸಿದ್ದು, ವಿವರ ಈ ಕೆಳಕಂಡಂತಿರುತ್ತದೆ.

| **ದಿನಾಂಕ 03-12-2022ರಂತೆ ಡಿ.ಐ.ಸಿ.ಜಿ.ಸಿ ವಿಮಾ ಮೊತ್ತದ ಪಾವತಿಯ ಸಂಕ್ಷಿಪ್ತ ಮಾಹಿತಿ** | | |
|---|---|---|
| **ವಿವರ** | **ಸಂಖ್ಯೆ (No of claims)** | **ವಿಮಾ ಮೊತ್ತ (ರೂ.ಕೋಟಿಗಳಲ್ಲಿ)** |
| ದಿನಾಂಕ 03-12-2022ರವರೆಗೆ ಪಾವತಿಸಿದ ಮೊತ್ತ | 22244 | 712.35 ಕೋಟಿ |
| ಪಾವತಿಗೆ ಬಾಕಿ ಇರುವ ಕ್ಲೈಮ್‌ಗಳು | 192 | 5.80 ಕೋಟಿ |
| ತಿರಸ್ಕರಿಸಲಾದ ಕ್ಲೈಮ್‌ಗಳು | 261 | 5.79 ಕೋಟಿ |
| **ಒಟ್ಟು ಕ್ಲೈಮ್** | **22,697** | **723.94 ಕೋಟಿ** |

30-09-2022 ರಂತೆ 38474 ಠೇವಣಾತಿದಾರರು ಉಳಿದಿದ್ದು (ಡಿಐಸಿಜಿಸಿ ಕ್ಲೈಂ ಪಾವತಿ ಮಾಡಿರುವವರ ಯಾವುದೇ ಉಳಿತಾಯ /ಚಾಲ್ತಿ ಖಾತೆಯನ್ನು ಮುಕ್ತಾಯಗೊಳಿಸಿರುವುದಿಲ್ಲ) ಅದರ ಒಟ್ಟು ಮೊತ್ತ ರೂ.1846.89 ಕೋಟಿ ಆಗಿರುತ್ತದೆ.

**ಸಾಲಗಳ ವಸೂಲಾತಿ:** ಬ್ಯಾಂಕಿನಿಂದ ನೀಡಿರುವ ಸಾಲಗಳ ವಸೂಲಾತಿ ಕಾರ್ಯವು ಪ್ರಗತಿಯಲ್ಲಿದ್ದು, ದಿನಾಂಕ 10-01-2020ರಿಂದ (ಕಾಯ್ದೆ ಕಲಂ 35ಎ ವಿಧಿಸಿದ ದಿನಾಂಕ) ಈವರೆವಿಗೆ ಒಟ್ಟು ರೂ. 192.67 ಕೋಟಿ (ನಕಲಿ ಸಾಲಗಳ ಮುಕ್ತಾಯಗಳು ಸೇರಿದಂತೆ) ಸಾಲ ವಸೂಲಾತಿಯಾಗಿರುತ್ತದೆ.

ಅಡಮಾನ ಸಾಲ ಹಾಗೂ ಮನೆಯ ಮೇಲಿನ ಭದ್ರತಾ ಸಾಲವನ್ನು ಪಡೆದು ಸುಸ್ತಿಯಾಗಿರುವ ಸಾಲಗಾರರಿಗೆ ನೋಟೀಸ್ ನೀಡಲಾಗಿ ನಂತರ ಸರ್ಫೇಸಿ ನೋಟೀಸ್ ಜಾರಿಗೊಳಿಸಲಾಗುತ್ತಿದೆ. ನಂತರ ಮುಂದಿನ ವಸೂಲಾತಿ ಕ್ರಮ ಕೈಗೊಳ್ಳಲಾಗುವುದು.

**ಈ.ಡಿ ಸಂಸ್ಥೆಗೆ ದೂರು:** ಬ್ಯಾಂಕಿನಲ್ಲಿ ಸಾಲದ ಖಾತೆಗಳನ್ನು ಪರಿಶೀಲಿಸಿದಾಗ, ದಿನಾಂಕ 31-03-2021ರಂತೆ ರೂ.1408.05 ಕೋಟಿ ಸಾಲಗಳ ಪೈಕಿ ರೂ.1,210.25 ಕೋಟಿಗಳ ನಕಲಿ ಸಾಲದ ಖಾತೆಗಳು ಕಂಡುಬಂದಿದ್ದು, ಉಳಿದ ರೂ.197.80 ಕೋಟಿಗಳ ಖಾತೆಗಳಲ್ಲಿ ಇತರೆ ಅವ್ಯವಹಾರ ಕಂಡುಬಂದಿರುತ್ತದೆ, ವಂಚನೆಯ ವಹಿವಾಟುಗಳನ್ನೊಳಗೊಂಡಿರುವ ಖಾತೆಗಳು 86% ರಷ್ಟಿದ್ದು ಅಂತಹ ಖಾತೆಗಳ ಸಾಲ ವಸೂಲಾತಿಗಾಗಿ ವಿವರಗಳನ್ನು ತನಿಖಾ ವರದಿಯೊಂದಿಗೆ ಈ.ಡಿ ಹಾಗೂ ಸಿ.ಐ.ಡಿ ಸಂಸ್ಥೆಗೆ ಸಲ್ಲಿಸುತ್ತಿದ್ದೇವೆ. ಪ್ರಮುಖ ಸುಸ್ತಿದಾರರಲ್ಲಿ ಹೆಚ್ಚು ಸಾಲವನ್ನು ಪಡೆದ 14 ಸಾಲಗಾರರ (ಒಟ್ಟು ರೂ 2282.08 ಕೋಟಿ) ಮಾಹಿತಿ ಹಾಗೂ ಲಭ್ಯವಿರುವ ದಾಖಲೆಗಳೊಂದಿಗೆ ತನಿಖಾ ವರದಿಯನ್ನು ಸಿ.ಐ.ಡಿ ಮತ್ತು ಈ.ಡಿ ಗೆ ಕಳುಹಿಸಿಕೊಡಲಾಗಿದೆ.

**ಬ್ಯಾಂಕಿನ ಪುನಶ್ಚೇತನ:** ಬ್ಯಾಂಕಿನ ಪುನಶ್ಚೇತನಕ್ಕೆ ಹಲವಾರು ಹೂಡಿಕೆದಾರರು, ಆರ್ಥಿಕ / ಬಂಡವಾಳ ಸಲಹೆಗಾರರು, ಸಣ್ಣ ಹಣಕಾಸು ಬ್ಯಾಂಕ್‌ನ ಅರ್ಜಿದಾರರು, ಕಿರು ಬಂಡವಾಳ ಸಂಸ್ಥೆಗಳನ್ನು ಸಂಪರ್ಕಿಸಲಾಗಿ, ಉತ್ತಮ ಪ್ರತಿಕ್ರಿಯೆ ದೊರೆತಿದ್ದು ಬಹಿರಂಗ ಪಡಿಸದ ಒಪ್ಪಂದ (ಎನ್.ಡಿ.ಎ) ಸಹಿ ಮಾಡಿ ಪರಿಶೀಲನೆ ಪ್ರಕ್ರಿಯೆಯನ್ನು ಹೂಡಿಕೆದಾರರು ಪ್ರಾರಂಭಿಸಿದ್ದಾರೆ. ಕರಡು ಆಸಕ್ತಿಯ ಅಭಿವ್ಯಕ್ತಿ ಕೋರುವ

ಸೂಚನೆಯನ್ನು (Expression of Interest) ದಿನಾಂಕ 20-01-2022ರಂದು ಭಾರತೀಯ ರಿಸರ್ವ್ ಬ್ಯಾಂಕಿಗೆ ಕಳುಹಿಸಲಾಗಿದೆ.

**ಸರ್ವಸದಸ್ಯರ ಮಹಾಸಭೆ :** 2019-20ರ ಆರ್ಥಿಕ ವರ್ಷದ ಸರ್ವಸದಸ್ಯರ ಮಹಾಸಭೆಯನ್ನು ದಿನಾಂಕ 01-05-2022ರಂದು ನಡೆಸಲಾಗಿದೆ. 2019-20ರ ಲೆಕ್ಕಪತ್ರಗಳು, 2014-15ರಿಂದ 2016-17ರವರೆಗಿನ ಮರು ಲೆಕ್ಕಪರಿಶೋಧನಾ ವರದಿ, ಬ್ಯಾಂಕಿನ ಪುನಶ್ಚೇತನಕ್ಕೆ ಆಸಕ್ತಿಯುಳ್ಳವರನ್ನು ಗುರುತಿಸಲು ಆಸಕ್ತಿಯ ಅಭಿವ್ಯಕ್ತಿ ಕೋರುವ ಸೂಚನೆ_(Expression of Interest) ಪ್ರಕಟಿಸುವ ಕುರಿತು ಸಭೆ ಸರ್ವಾನುಮತದಿಂದ ಅಂಗೀಕರಿಸಿದೆ.

**ಮರು ಲೆಕ್ಕಪರಿಶೋಧನೆ :** ಅಕ್ಟೋಬರ್-2019ರ ಭಾರತೀಯ ರಿಸರ್ವ್ ಬ್ಯಾಂಕಿನ ಪರಿವೀಕ್ಷಣೆಯ ಸಮಯದಲ್ಲಿ ವಂಚನೆಯ ಹಾಗೂ ಅಕ್ರಮ ವಹಿವಾಟುಗಳು ಕಂಡು ಬಂದ ಕಾರಣ, ಕರ್ನಾಟಕ ಸರ್ಕಾರದ ಲೆಕ್ಕಪರಿಶೋಧನಾ ಇಲಾಖೆಯ ನಿರ್ದೇಶಕರು ಜುಲೈ-2020ರಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959ರಡಿಯಲ್ಲಿ 2014-15ರಿಂದ 2018-19ರ ಸಾಲುಗಳ ಮರು ಲೆಕ್ಕ ಪರಿಶೋಧನೆಗೆ ಆದೇಶಿಸಿರುತ್ತಾರೆ. 2014-15ರಿಂದ 2018-19ರ 5 ವರ್ಷಗಳ, ಮರು ಲೆಕ್ಕ ಪರಿಶೋಧನಾ ಕಾರ್ಯವು ಮುಕ್ತಾಯಗೊಂಡಿದ್ದು, ಸದರಿ ಸಾಲುಗಳ ಲೆಕ್ಕಪತ್ರಗಳ ಪುನರ್ ಪರಿಶೀಲನೆಯ ನಂತರ ಮರು ಲೆಕ್ಕ ಪರಿಶೋಧನೆಯ ಪರಿಷ್ಕೃತ ವರದಿಯಂತೆ ರೂ.1294 ಕೋಟಿಗಳ ನಷ್ಟ ಹಾಗೂ ರೂ.811 ಕೋಟಿಗಳ ಅವಕಾಶವನ್ನು ಕಲ್ಪಿಸಲಾಗಿದ್ದು, ಬ್ಯಾಂಕಿನ 2020-21ರ ಶಾಸನಬದ್ಧ ಲೆಕ್ಕಪರಿಶೋಧನೆಯ ವರದಿಯಲ್ಲಿ ಅಳವಡಿಸಿಕೊಳ್ಳಲಾಗಿದೆ.

**2020-21ರ ಶಾಸನಬದ್ಧ ಲೆಕ್ಕ ಪರಿಶೋಧನೆ :** ಮ|| ಗುರು & ಜನಾ, ಲೆಕ್ಕ ಪರಿಶೋಧಕರು 2020-21ರ ಆರ್ಥಿಕ ವರ್ಷದ ಶಾಸನಬದ್ಧ ಲೆಕ್ಕ ಪರಿಶೋಧನೆಯನ್ನು ನಡೆಸಿದ್ದು, ವರದಿಯನ್ನು ದಿನಾಂಕ 26-08-2022 ರಂದು ಸಲ್ಲಿಸಿರುತ್ತಾರೆ.

**ಭಾರತೀಯ ರಿಸರ್ವ್ ಬ್ಯಾಂಕಿನ ಪರಿವೀಕ್ಷಣೆ (RBI Inspection):** 2019-2021ನೇ ಸಾಲುಗಳ ಭಾರತೀಯ ರಿಸರ್ವ್ ಬ್ಯಾಂಕಿನ ಪರಿವೀಕ್ಷಣೆಯು ದಿನಾಂಕ 05-09-2022ರಂದು ಪ್ರಾರಂಭಗೊಂಡು 21-09-2022ರಂದು ಮುಕ್ತಾಯಗೊಂಡಿದ್ದು ಪರಿವೀಕ್ಷಣೆಯ ವರದಿ ಬಂದಿರುತ್ತದೆ.

ಬ್ಯಾಂಕಿನ ಪುನಶ್ಚೇತನ ಕುರಿತು ಹೂಡಿಕೆದಾರರನ್ನು ಹುಡುಕುವ ಕಾರ್ಯವು ಚಾಲ್ತಿಯಲ್ಲಿರುತ್ತದೆ. ಬ್ಯಾಂಕಿನ ಪುನಶ್ಚೇತನ ಕುರಿತು ಕೆಲವು ಹೂಡಿಕೆದಾರರು ಆಸಕ್ತಿ ತೋರುತ್ತಿದ್ದು, ಆರ್. ಬಿ. ಐ. ನಿಂದ ಅನುಮತಿ ಬಂದ ನಂತರ ಈ ಕುರಿತು ಮುಂದಿನ ಕ್ರಮವಿಡಲಾಗುವುದು.

**ಕಡತ ಸಂಖ್ಯೆ: ಸಿಒ 119 ಸಿಆರ್‌ಸಿ 2022**

**(ಎಸ್.ಟಿ.ಸೋಮಶೇಖರ್)**
**ಸಹಕಾರ ಸಚಿವರು**

## ಅನುಬಂಧ-1

### ಬ್ಯಾಂಕಿಗೆ ವಂಚನೆ ಮಾಡಿರುವ ಸಿಬ್ಬಂದಿಗಳ ವಿರುದ್ಧ ಸಿ.ಐ.ಡಿ ಹಾಗೂ ಈ.ಡಿ ಸಂಸ್ಥೆಗೆ ನೀಡಿರುವ ದೂರಿನ ವಿವರ

| ಕ್ರ ಸಂ | ಹೆಸರು ಮತ್ತು ಹುದ್ದೆ | ಸಿಬ್ಬಂದಿ ಸಂಖ್ಯೆ | ದೂರು ಸಂಖ್ಯೆ | ದೂರು ದಿನಾಂಕ |
|---|---|---|---|---|
| 1 | ಶ್ರೀ ಸಂತೋಷ್ ಕುಮಾರ್ ಎ<br>ಮುಖ್ಯ ಕಾರ್ಯನಿರ್ವಾಹಣಾಧಿಕಾರಿ | ಎಸ್.ಜಿ.ಆರ್-ಪಿ- | ಎಸ್.ಜಿ.ಆರ್.ಎಸ್.ಬಿ.ಎನ್/ಓ.ಆರ್/718/2020-21<br>ಎಸ್.ಜಿ.ಆರ್.ಎಸ್.ಬಿ.ಎನ್/ಓ.ಆರ್/3178/2021-22<br>ಎಸ್.ಜಿ.ಆರ್/ಪಿ.ಕೆ/27/2022-23<br>ಎಸ್.ಜಿ.ಆರ್/ಪಿ.ಕೆ/518/2022-23<br>ಎಸ್.ಜಿ.ಆರ್/ಪಿ.ಕೆ/403/2022-23 | 18-01-2021<br>14-03-2022<br>08-04-2022<br>15-06-2022<br>03-06-2022 |
| 2 | ಶ್ರೀ ಮುರಳೀಧರ್ ಅರಿಕಾಡಿ<br>ವ್ಯವಸ್ಥಾಪಕರು | ಎಸ್.ಜಿ.ಆರ್-ಪಿ- | ಎಸ್.ಜಿ.ಆರ್/ಪಿ.ಕೆ/518/2022-23<br>ಎಸ್.ಜಿ.ಆರ್/ಪಿ.ಕೆ/403/2022-23 | 15-06-2022<br>03-06-2022 |
| 3 | ಶ್ರೀ ಪ್ರಶಾಂತ್ ಹೆಚ್.ಆರ್<br>ಸಹಾಯಕ ವ್ಯವಸ್ಥಾಪಕರು | ಎಸ್.ಜಿ.ಆರ್-ಪಿ- | ಎಸ್.ಜಿ.ಆರ್.ಎಸ್.ಬಿ.ಎನ್/ಓ.ಆರ್/718/2020-21<br>ಎಸ್.ಜಿ.ಆರ್/ಪಿ.ಕೆ/403/2022-23 | 18-01-2021<br>03-06-2022 |
| 4 | ಶ್ರೀಮತಿ ಜ್ಯೋತಿ ಎಸ್<br>ಸಹಾಯಕ ವ್ಯವಸ್ಥಾಪಕರು | ಎಸ್.ಜಿ.ಆರ್-ಪಿ- | ಎಸ್.ಜಿ.ಆರ್/ಪಿ.ಕೆ/403/2022-23 | 03-06-2022 |
| 5 | ಶ್ರೀಮತಿ ರೋಹಿಣಿ ಪಿ<br>ಹಿರಿಯ ಸಹಾಯಕರು | ಎಸ್.ಜಿ.ಆರ್-ಪಿ- | ಎಸ್.ಜಿ.ಆರ್/ಪಿ.ಕೆ/403/2022-23 | 03-06-2022 |
| 6 | ಶ್ರೀಮತಿ ಕಾವ್ಯ ಶ್ರೀ ಎನ್ ಕೆ<br>ಹಿರಿಯ ಸಹಾಯಕರು | ಎಸ್.ಜಿ.ಆರ್-ಪಿ- | ಎಸ್.ಜಿ.ಆರ್/ಪಿ.ಕೆ/403/2022-23 | 03-06-2022 |
| 7 | ಶ್ರೀಮತಿ ಪದ್ಮಜಾ ಎಸ್ ರಾವ್<br>ಹಿರಿಯ ಸಹಾಯಕರು | ಎಸ್.ಜಿ.ಆರ್-ಪಿ- | ಎಸ್.ಜಿ.ಆರ್/ಪಿ.ಕೆ/403/2022-23 | 03-06-2022 |
| 8 | ಶ್ರೀ ಗುರುರಾಜ ಪಿ<br>ಕಿರಿಯ ಸಹಾಯಕರು | ಎಸ್.ಜಿ.ಆರ್-ಪಿ- | ಎಸ್.ಜಿ.ಆರ್.ಎಸ್.ಬಿ.ಎನ್/ಓ.ಆರ್/1466/2020-21<br>ಎಸ್.ಜಿ.ಆರ್/ಪಿ.ಕೆ/403/2022-23 | 30-03-2021<br>03-06-2022 |
| 9 | ಶ್ರೀ ಶ್ರೀರಂಗ ಕುಲಕರ್ಣಿ<br>ಹಿರಿಯ ಸಹಾಯಕರು | ಎಸ್.ಜಿ.ಆರ್-ಪಿ- | ಎಸ್.ಜಿ.ಆರ್.ಎಸ್.ಬಿ.ಎನ್/ಓ.ಆರ್/1466/2020-21<br>ಎಸ್.ಜಿ.ಆರ್/ಪಿ.ಕೆ/518/2022-23<br>ಎಸ್.ಜಿ.ಆರ್/ಪಿ.ಕೆ/403/2022-23 | 30-03-2021<br>15-06-2022<br>03-06-2022 |
| 10 | ಶ್ರೀ ರಾಕೇಶ್ ಡಿ<br>ಹಿರಿಯ ಸಹಾಯಕರು | ಎಸ್.ಜಿ.ಆರ್-ಪಿ- | ಎಸ್.ಜಿ.ಆರ್.ಎಸ್.ಬಿ.ಎನ್/ಓ.ಆರ್/1466/2020-21<br>ಎಸ್.ಜಿ.ಆರ್/ಪಿ.ಕೆ/403/2022-23 | 30-03-2021<br>03-06-2022 |
| 11 | ಶ್ರೀ ಪವನ್ ಪಿ<br>ಹಿರಿಯ ಸಹಾಯಕರು | ಎಸ್.ಜಿ.ಆರ್-ಪಿ- | ಎಸ್.ಜಿ.ಆರ್.ಎಸ್.ಬಿ.ಎನ್/ಓ.ಆರ್/2819/2021-22<br>ಎಸ್.ಜಿ.ಆರ್.ಎಸ್.ಬಿ.ಎನ್/ಓ.ಆರ್/3206/2021-22<br>ಎಸ್.ಜಿ.ಆರ್.ಎಸ್.ಬಿ.ಎನ್/ಓ.ಆರ್/3213/2 | 15-02-2022<br>17-03-2022<br>18-03-2022<br>15-06-2022<br>03-06-2022 |
| 12 | ಶ್ರೀ ಸುಬ್ರಹ್ಮಣ್ಯ ಟಿ.ಎಸ್<br>ಹಿರಿಯ ಸಹಾಯಕರು | ಎಸ್.ಜಿ.ಆರ್-ಪಿ- | ಎಸ್.ಜಿ.ಆರ್/ಪಿ.ಕೆ/403/2022-23 | 03-06-2022 |

ಅನುಬಂಧ-1

ಬ್ಯಾಂಕಿಗೆ ವಂಚನೆ ಮಾಡಿರುವ ಸಿಬ್ಬಂದಿಗಳ ವಿರುದ್ಧ ಸಿ.ಐ.ಡಿ ಹಾಗೂ ಈ.ಡಿ ಸಂಸ್ಥೆಗೆ ನೀಡಿರುವ ದೂರಿನ ವಿವರ

| ಕ್ರ.ಸಂ | ಹೆಸರು ಮತ್ತು ಹುದ್ದೆ | ಸಿಬ್ಬಂದಿ ಸಂಖ್ಯೆ | ದೂರು ಸಂಖ್ಯೆ | ದೂರು ದಿನಾಂಕ |
|---|---|---|---|---|
| 13 | ಶ್ರೀ ರವಿ ಕುಮಾರ್ ಪಿ.ಎಸ್<br>ಕಿರಿಯ ಸಹಾಯಕರು | ಎಸ್.ಜಿ.ಆರ್-ಪಿ- | ಎಸ್.ಜಿ.ಆರ್.ಎಸ್.ಬಿ.ಎನ್/ಓ.ಆರ್/1466/2020-21<br>ಎಸ್.ಜಿ.ಆರ್/ಪಿ.ಕೆ/518/2022-23 | 30-03-2021<br>15-06-2022 |
| 14 | ಶ್ರೀ ಕಾರ್ತಿಕ್ ಬಿ ಎನ್<br>ಕಿರಿಯ ಸಹಾಯಕರು | ಎಸ್.ಜಿ.ಆರ್-ಪಿ- | ಎಸ್.ಜಿ.ಆರ್.ಎಸ್.ಬಿ.ಎನ್/ಓ.ಆರ್/1339/2 | 14-02-2022 |
| 15 | ಶ್ರೀ ಗಣಪತಿ ಎಲ್ ಹೆಗ್ಡೆ<br>ಕಿರಿಯ ಸಹಾಯಕರು | ಎಸ್.ಜಿ.ಆರ್-ಪಿ- | ಎಸ್.[illegible].ಆರ್.ಎಸ್.[illegible].ಎನ್/[illegible].ಆರ್/[illegible]20-21<br>ಎಸ್.ಜಿ.ಆರ್/ಪಿ.ಕೆ/518/2022-23<br>ಎಸ್.ಜಿ.ಆರ್/ಪಿ.ಕೆ/403/2022-23 | 18-01-2021<br>15-06-2022<br>03-06-2022 |
| 16 | ಶ್ರೀ ಶ್ರೀರಾಮ್ ಮಯ್ಯ<br>ಕಿರಿಯ ಸಹಾಯಕರು | ಎಸ್.ಜಿ.ಆರ್-ಪಿ- | ಎಸ್.ಜಿ.ಆರ್.ಎಸ್.ಬಿ.ಎನ್/ಓ.ಆರ್/2703/2021-22<br>ಎಸ್.ಜಿ.ಆರ್.ಎಸ್.ಬಿ.ಎನ್/ಓ.ಆರ್/3206/2021-22<br>ಎಸ್.ಜಿ.ಆರ್.ಎಸ್.ಬಿ.ಎನ್/ಓ.ಆರ್/3213/2021-22 | 03-02-2022<br>17-03-2022<br>18-03-2022 |
| 17 | ಶ್ರೀ ರಾಜೀವ್ ಎ.ಜಿ<br>ಕಿರಿಯ ಸಹಾಯಕರು | ಎಸ್.ಜಿ.ಆರ್-ಪಿ- | ಎಸ್.ಜಿ.ಆರ್.ಎಸ್.ಬಿ.ಎನ್/ಓ.ಆರ್/1339/2021-22<br>ಎಸ್.ಜಿ.ಆರ್/ಪಿ.ಕೆ/518/2022-23 | 14-02-2022<br>15-06-2022 |
| 18 | ಶ್ರೀ ಶ್ರೀಪಾದ್ ಹೆಗ್ಡೆ<br>ಕಿರಿಯ ಸಹಾಯಕರು | ಎಸ್.ಜಿ.ಆರ್-ಪಿ- | ಎಸ್.ಜಿ.ಆರ್.ಎಸ್.ಬಿ.ಎನ್/ಓ.ಆರ್/718/2020-21<br>ಎಸ್.ಜಿ.ಆರ್/ಪಿ.ಕೆ/403/2022-23 | 18-01-2021 |
| 19 | ಶ್ರೀ ಯೋಗೀಶ್ ಛಾತ್ರ<br>ಸಹಾಯಕರು | ಎಸ್.ಜಿ.ಆರ್-ಪಿ- | ಎಸ್.ಜಿ.ಆರ್.ಎಸ್.ಬಿ.ಎನ್/ಓ.ಆರ್/1229/2 | 30-08-2021 |
| 20 | ಶ್ರೀ ರವಿ ಪ್ರಕಾಶ್<br>ಸಹಾಯಕರು | ಎಸ್.ಜಿ.ಆರ್-ಪಿ- | ಎಸ್.ಜಿ.ಆರ್.ಎಸ್.ಬಿ.ಎನ್/ಓ.ಆರ್/1229/2 | 30-08-2021 |
| 21 | ಶ್ರೀ ಮುರಳೀಧರ್ ಭಟ್ ಎಸ್<br>ಸಹಾಯಕರು / ಚಾಲಕರು | ಎಸ್.ಜಿ.ಆರ್-ಪಿ- | ಎಸ್.ಜಿ.ಆರ್.ಎಸ್.ಬಿ.ಎನ್/ಓ.ಆರ್/1229/2 | 30-08-2021 |
| 22 | ಶ್ರೀ ಪವನ್ ಕುಮಾರ್ ಪಾಟೀಲ್<br>ಸಹಾಯಕರು | ಎಸ್.ಜಿ.ಆರ್-ಪಿ- | ಎಸ್.ಜಿ.ಆರ್.ಎಸ್.ಬಿ.ಎನ್/ಓ.ಆರ್/1229/2 | 30-08-2021 |
| 23 | ಶ್ರೀ ಆದಿತ್ಯ ಶಾಸ್ತ್ರಿ<br>ಸಹಾಯಕರು | ಎಸ್.ಜಿ.ಆರ್-ಪಿ- | ಎಸ್.ಜಿ.ಆರ್.ಎಸ್.ಬಿ.ಎನ್/ಓ.ಆರ್/1229/2 | 30-08-2021 |

ಸಹಕಾರ ಸಂಘಗಳ ಜಂಟಿ ನಿಬಂಧಕರು
(ಪಟ್ಟಣ ಬ್ಯಾಂಕುಗಳ ವಿಭಾಗ)

## ಅನುಬಂಧ-2

## ಬ್ಯಾಂಕಿಗೆ ವಂಚನೆ ಮಾಡಿರುವ ನಿರ್ದೇಶಕರ ವಿರುದ್ಧ ಸಿ.ಐ.ಡಿ ಹಾಗೂ ಈ.ಡಿ ಸಂಸ್ಥೆಗೆ ನೀಡಿರುವ ದೂರಿನ ವಿವರ

| ಕ್ರ ಸಂ | ಹೆಸರು | ದೂರು ಸಂಖ್ಯೆ | ದೂರು ದಿನಾಂಕ |
|---|---|---|---|
| 1 | ಶ್ರೀ ಕೃಷ್ಣನ್ ಜಿ. ನಿರ್ದೇಶಕರು | ಎಸ್.ಜಿ.ಆರ್.ಎಸ್.ಬಿ.ಎನ್/ಓ.ಆರ್/3077/2021-22<br>ಎಸ್.ಜಿ.ಆರ್.ಎಸ್.ಬಿ.ಎನ್/ಓ.ಆರ್/3206/2021-22 | 05-03-2022<br>17-03-2022 |
| 2 | ಶ್ರೀ ಪಿ.ಹೆಚ್ ಲಕ್ಷ್ಮೀನಾರಾಯಣ ಆಚಾರ್ಯ, ನಿರ್ದೇಶಕರು | ಎಸ್.ಜಿ.ಆರ್/ಪಿ.ಕೆ/518/2022-23 | 15-06-2022 |

ಸಹಕಾರ ಸಂಘಗಳ ಜಂಟಿ ನಿಬಂಧಕರು
(ಪಟ್ಟಣ ಬ್ಯಾಂಕುಗಳ ವಿಭಾಗ)

ಅನುಬಂಧ-3

ಬ್ಯಾಂಕಿಗೆ ವಂಚನೆ ಮಾಡಿರುವ ಗ್ರಾಹಕರ ವಿರುದ್ಧ ಸಿ.ಐ.ಡಿ ಹಾಗೂ ಈ.ಡಿ ಸಂಸ್ಥೆಗೆ ನೀಡಿರುವ ದೂರಿನ ವಿವರ

| ಕ್ರ ಸಂ | ಹೆಸರು | ದೂರು ಸಂಖ್ಯೆ | ದೂರು ದಿನಾಂಕ |
|---|---|---|---|
| 1 | ಶ್ರೀ ಕಿರಣ್ ಜಿ | ಎಸ್.ಜಿ.ಆರ್.ಎಸ್.ಬಿ.ಎನ್/ಓ.ಆರ್/1229/2020-21 | 30-08-2021 |
| 2 | ಶ್ರೀ ಶ್ರೀಕಾಂತ್ ಎಂ ಎನ್ | ಎಸ್.ಜಿ.ಆರ್.ಎಸ್.ಬಿ.ಎನ್/ಓ.ಆರ್/1369/2021-22 | 08-09-2021 |
| 3 | ಶ್ರೀಮತಿ ಹೇಮಾಮಾಲಿನಿ ವಿ | ಎಸ್.ಜಿ.ಆರ್.ಎಸ್.ಬಿ.ಎನ್/ಓ.ಆರ್/3077/2021-22 | 05-03-2022 |
| 4 | ಶ್ರೀ ಆಶಿಕ್ ಅನಿರುದ್ಧ್ ಕೃಷ್ಣನ್ | ಎಸ್.ಜಿ.ಆರ್.ಎಸ್.ಬಿ.ಎನ್/ಓ.ಆರ್/3077/2021-22 | 05-03-2022 |
| 5 | ಶ್ರೀ ಸುಧೀರ್ ಬಾಬು ಟಿ | ಎಸ್.ಜಿ.ಆರ್.ಎಸ್.ಬಿ.ಎನ್/ಓ.ಆರ್/3178/2021-22<br>ಎಸ್.ಜಿ.ಆರ್.ಎಸ್.ಬಿ.ಎನ್/ಓ.ಆರ್/3213/2021-22<br>ಎಸ್.ಜಿ.ಆರ್.ಎಸ್.ಬಿ.ಎನ್/ಓ.ಆರ್/3246/2021-22 | 14-03-2022<br>18-03-2022<br>22-03-2022 |
| 6 | ಶ್ರೀ ಚೇತನ್ ಕುಮಾರ್ ಆರ್ | ಎಸ್.ಜಿ.ಆರ್.ಎಸ್.ಬಿ.ಎನ್/ಓ.ಆರ್/3178/2021-22<br>ಎಸ್.ಜಿ.ಆರ್/ಪಿ.ಕೆ/403/2022-23 | 14-03-2022<br>03-06-2022 |
| 7. | ಶ್ರೀ ರಾಮಣ್ಣ ಈ | ಎಸ್.ಜಿ.ಆರ್/ಪಿ.ಕೆ/403/2022-23 | 03-06-2022 |

ಸಹಕಾರ ಸಂಘಗಳ ಜಂಟಿ ನಿಬಂಧಕರು
(ಪಟ್ಟಣ ಬ್ಯಾಂಕುಗಳ ವಿಭಾಗ)

## ಅನುಬಂಧ-4

14 ಪ್ರಮುಖ ಫಲಾನುಭವಿಗಳ ವಿರುದ್ಧ ಸಿ.ಐ.ಡಿ ಹಾಗೂ ಈ.ಡಿ ಸಂಸ್ಥೆಗೆ ನೀಡಿರುವ ದೂರಿನ ವಿವರ

| ಕ್ರ ಸಂ | ಸುಸ್ತಿದಾರರ ಹೆಸರು | ಸಾಲದ ಸಂಖ್ಯೆ | ಸಾಲದ ಮೊತ್ತ | ಕ್ರ ಸಂ |
|---|---|---|---|---|
| 1 | ಶ್ರೀ ಅಶೋಕ ರೆಡ್ಡಿ, | | | 1 |
| 2 | ಶ್ರೀ ರಘುನಾಥ್ ಜಿ | 12 | 74.67 | ಎಸ್.ಜಿ.ಆರ್/ಕೆ.ವೈ/160/2022-23, ದಿನಾಂಕ 28-04-2022 |
| | ಶ್ರೀ ರಘುನಾಥ್ ಜಿ ಮತ್ತು ಇತರರು | 71 | 829.63 | ಎಸ್.ಜಿ.ಆರ್/ಎಸ್.ಕೆ/1465/2022-23, ದಿನಾಂಕ 11-10-2022 |
| 3 | ಶ್ರೀ ರಾಜೇಶ್ ವಿ.ಆರ್ | 118 | 214.75 | ಎಸ್.ಜಿ.ಆರ್/ಎಸ್.ಕೆ/445/2022-23, ದಿನಾಂಕ 06-06-2022 |
| 4 | ಶ್ರೀ ಜಗನ್ನಾಥ್ ಹೆಗ್ಡೆ | 167 | 228.87 | ಎಸ್.ಜಿ.ಆರ್/ಎಸ್.ಕೆ/800/2022-23, ದಿನಾಂಕ 02-08-2022 |
| 5 | ಶ್ರೀ ಡಿ.ಪಿ ನವೀನ್ | 36 | 121.72 | ಎಸ್.ಜಿ.ಆರ್/ಎ.ವಿ/794/2022-23, ದಿನಾಂಕ 27-07-2022 |
| 6 | ಶ್ರೀ ಶ್ರೀನಿವಾಸನ್ ಜಿ | 44 | 59.86 | ಎಸ್.ಜಿ.ಆರ್/ಎಸ್.ಕೆ/783/2022-23, ದಿನಾಂಕ 27-07-2022 |
| 7 | ಶ್ರೀ ಬಿ ಜಿ ರಾಮಕೃಷ್ಣ | 39 | 95.24 | ಎಸ್.ಜಿ.ಆರ್/ಎಸ್.ಕೆ/852/2022-23, ದಿನಾಂಕ 05-08-2022 |
| 8 | ಶ್ರೀ ಕುಮುರೇಶ್‌ಬಾಬು | 33 | 70.36 | ಎಸ್.ಜಿ.ಆರ್/ಎಸ್.ಕೆ/966/2022-23, ದಿನಾಂಕ 22-08-2022 |
| 9 | ಶ್ರೀ ಹರಿಕೃಷ್ಣ | 1 | 5.07 | ಎಸ್.ಜಿ.ಆರ್/ಎಸ್.ಕೆ/1585/2022-23, ದಿನಾಂಕ 21-10-2022 |
| 10 | ಶ್ರೀ ರಾಜಸಿಂಹ ಎಸ್ | 11 | 11.29 | ಎಸ್.ಜಿ.ಆರ್/ಎಸ್.ಕೆ/1329/2022-23, ದಿನಾಂಕ 11-10-2022 |
| 11 | ಶ್ರೀ ಲೋಕೇಶ್ ಎನ್ | 55 | 69.00 | ಎಸ್.ಜಿ.ಆರ್/ಎಸ್.ಕೆ/1235/2022-23, ದಿನಾಂಕ 19-09-2022 |
| 12 | ಶ್ರೀ ರಜತ್ ಎಂಆರ್ | 23 | 60.01 | ಎಸ್.ಜಿ.ಆರ್/ಎಸ್.ಕೆ/1816/2022-23, ದಿನಾಂಕ 24-11-2022 |

| ಕ್ರ ಸಂ | ಸುಸ್ತಿದಾರರ ಹೆಸರು | ಸಾಲದ ಸಂಖ್ಯೆ | ಸಾಲದ ಮೊತ್ತ | ಕ್ರ ಸಂ |
|---|---|---|---|---|
| 13 | ಶ್ರೀ ವಿಜಯಸಿಂಹ ಎನ್ | 20 | 16.72 | ಎಸ್.ಜಿ.ಆರ್/ಎಸ್.ಕೆ/1880/2022-23, ದಿನಾಂಕ 01-12-2022 |
| 14 | ಶ್ರೀ ಸತ್ಯನಾರಾಯಣ ಎನ್ | 53 | 124.69 | ಎಸ್.ಜಿ.ಆರ್/ಎಸ್.ಕೆ/2081/2022-23, ದಿನಾಂಕ 13-12-2022 |
| | ಒಟ್ಟು | 774 | 2282.08 | |

ಸಹಕಾರ ಸಂಘಗಳ ಜಂಟಿ ನಿಬಂಧಕರು

(ಪಟ್ಟಣ ಬ್ಯಾಂಕುಗಳ ವಿಭಾಗ)



330 - 15